## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ.450 /2024

ಸಾಕ್ಷಿಗೆ ದಿನಾಂಕ 21-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 01 P.W.: 03

| | | |
|---|---|---|
| ಹೆಸರು | : | ಧನಂಜಯ ಎಂ |
| ತಂದೆಯ ಹೆಸರು | : | ನಾಗಯ್ಯ ಸ್ವಾಮಿ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಪಿಎಸ್ ಐ |
| ವಾಸ ಸ್ಥಳ | : | ಹನುಮಸಾಗರ ಪೋಲೀಸ್ ಠಾಣೆ ಕೊಪ್ಪಳ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 14-04-2022 ರಿಂದ 28-06-2024 ರವರೆಗೆ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 06.03.2024 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ 4 ರವರು ಅವರ ಗಸ್ತಿನಲ್ಲಿರುವ ಹಳ್ಳಿಯಾದ ಹೊಸಕೇರಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮಟಕಾ ಜೂಜಾಟವನ್ನುಬರೆಯುತ್ತಿದ್ದಾನೆ ಅಂತಾ ಮಾಹಿತಿ ಇದೇ ಅಂತಾ ನನಗೆ ತಿಳಿಸಿದನು . ನಂತರ ನಾನು ದಾಳಿಗಾಗಿ ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡು ಸಂಜೆ 4.45 ಗಂಟೆಗೆ ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ 4 ರಿಂದ 6 ರವರ ಜೊತೆ ನಮ್ಮ ಇಲಾಖಾ ವಾಹನ ಕೆಎ 34 ಜಿ 621 ರೇದ್ದರಲ್ಲಿ ಹೊರಟು ಸದರಿ ಗ್ರಾಮದ ಹೊರಭಾಗಕ್ಕೆ ಸಂಜೆ 5.20 ಕ್ಕೆ ತಲುಪಿರುತ್ತೇವೆ. ನಂತರ ಚಾಸಾ 4 ರವರ ಮೂಲಕ ಸಂಜೆ 5.25 ಕ್ಕೆ ಇಬ್ಬರು ಪಂಚರಾದ ಚಾಸ 2 ಮತ್ತು 3 ರವರನ್ನು ಬರಮಾಡಿಕೊಂಡು ದಾಳಿಯ ವಿಚಾರವನ್ನು ಅವರಿಗೆ ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸಲು ಕೋರಿಕೊಂಡಿರುತ್ತೇನೆ. ನಂತರ ಅವರು ಒಪ್ಪಿದ ಮೇರೆಗೆ ಸಂಜೆ 5.30 ಕ್ಕೆ ನಾನು ಕೃತ್ಯ ಸ್ಥಳಕ್ಕೆ ಹೋಗಿರುತ್ತೇನೆ. ಅಲ್ಲಿ ಹೋಗಿ ನೋಡಲಾಗಿ ಮಟಕಾ ಜೂಜಾಟದ ಅಂಕೆ ಸಂಖ್ಯೆಯನ್ನು ಬರೆಯುುತ್ತಿದ್ದನು ಮತ್ತು 1 ರೂ ಗೆ 80 ರೂ ಕೊಡುತ್ತೇನೆ ಅಂತಾ ಚೀಟಿಯಲ್ಲಿ ನಂಬರು ಬರೆದು ಕೊಡುತ್ತಿದ್ದನು. ನಾವು ದಾಳಿ ಮಾಡಿದ ತಕ್ಷಣ ಅಲ್ಲಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ನಾವು ಅಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದು ಅವನ ಹೆಸರನ್ನು ವಿಚಾರಿಸಲಾಗಿ ಅವನು ತನ್ನ ಹೆಸರು ಚಲಕನಟ್ಟಿ ವಿರಣ್ಣ ಅಂತಾ

ತಿಳಿಸಿದನು. ನಾವು ಅವನನ್ನು ತಪಾಸಣೆ ಮಾಡಲಾಗಿ ಅವನ ಬಳಿ 1050 ರೂ ನಗದು ಹಣ ಇತ್ತು ಒಂದು ಮಟಕಾ ಪಟ್ಟಿ ಮತ್ತು ಒಂದು ಬಾಲ್ ಪೆನ್ ಇತ್ತು. ಅವುಗಳನು ಪಂಚರ ಸಮ್ಮುಖದಲ್ಲಿ ಅಮಾನತು ಪಡಿಸಿಕೊಳ್ಳಲಾಯಿತು. ಪಂಚನಾಮೆಯನ್ನು ಸಂಜೆ 5.30 ರಿಂದ 6.15 ನಿ ವರೆಗೆ ಕೃತ್ಯ ಸ್ಥಳದಲ್ಲಿ ತಯಾರಿಸಲಾಯಿತು. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ ಅದಕ್ಕೆ ನಾನು ಸಹಿ ಮಾಡಿದ್ದೇನೆ, ಸಾಕ್ಷಿಯು ನಿಪಿ 1 ರಲ್ಲಿ ತನ್ನಸಾಕ್ಷಿ ಇದೆ ಎಂದು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಬಿ ಅಂತಾ ಗುರುತಿಸಲಾಯಿತು. ಮಟಕಾ ಪಟ್ಟಿ, ಪೆನ್ ಮತ್ತು 1050 ರೂ ನಗದನ್ನು ನಾನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಮಟಕಾ ಪಟ್ಟಿಯನ್ನು ಮು ಮಾ 1, ಪೆನ್ ಅನ್ನು ಮೂ ಮಾ 2, ನಗದನ್ನು ಮೂ ಮಾ 3 ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ನಾನು ಗುರುತಿಸುತ್ತೇನೆ. ಅವನು ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ. ಆರೋಪಿತ, ಮುದ್ದೆ ಮಾಲು ಮತ್ತು ಪಂಚನಾಮೆ ಸಮೇತ ಠಾಣೆಗೆ ಹಾಜರಾಗಿ ನಾನು ಠಾಣೆಯಲ್ಲಿ ಎಸ್ ಹೆಚ್ ಓ ಅವರ ಮುಂದೆ ಆರೋಪಿತನ ವಿರುದ್ಧ ಸರಕಾರದ ಪರವಾಗಿ ದೂರು ನೀಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು. ಆರೋಪಿ ಪರ ಬಿಬಿ ಆರ್ ವಕೀಲರಿಂದಃ- ಇಲ್ಲ

ಹೋಸಕೇರಿ ಗ್ರಾಮ ದೊಡ್ಡ ಗ್ರಾಮವಿದೆ. ಆ ದಿನ ಇನ್ನೊಂದು ಕೃತ್ಯ ನಡೆದ ಸ್ಥಳಕ್ಕೆ ಮತ್ತು ಪ್ರಸ್ತುತ ಘಟನ ಸ್ಥಳಕ್ಕೂ ಸುಮಾರು 200 ಮೀ ಅಂತರವಿರುತ್ತದೆ. ಇನ್ನೊಂದು ಪ್ರಕರಣದ ಘಟನ ಸ್ಥಳದಿಂದ ಪ್ರಸ್ತುತ ಪ್ರಕರಣದ ಘಟನ ಸ್ಥಳ ಕಾಣುತ್ತದೆ ಎಂದರೆ ಸರಿಯಲ್ಲ. ಆರೋಪಿತನನ್ನು ನಾನು ದಸ್ತಗಿರಿ ಮಾಡಿದಾಗ ಅಲ್ಲಿದ್ದ ಜನರು ಒಡಿಹೋಗಿರುತ್ತಾರೆ ಅಲ್ಲಿ ಬೇರೆ ಯಾರಾದರೂ ಇತರೆ ಸಾರ್ವಜನಿಕರು ಇದ್ದರಾ ಎನ್ನುವುದನ್ನು ನಾನು ಗಮನಿಸಿಲ್ಲ. ಘಟನ ಸ್ಥಳದ ಅಕ್ಕಪಕ್ಕ ವಾಸದ ಮನೆಗಳು ಇದ್ದವು. ಅವುಗಳಲ್ಲಿ ವಾಸಿಸುವ ಜನರು ಇದ್ದರು ಇಲ್ಲ ಎನ್ನುವುದರ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ನಾನು ಯಾವುದೇ ದಾಳಿ ಮಾಡಿಲ್ಲ, ಆರೋಪಿತನಿಂದ ಯಾವುದೇ ಮುಮಾ ಗಳನ್ನು ಅಮಾನತು ಪಡಿಸಿಕೊಂಡಿಲ್ಲ, ಪಂಚನಾಮೆ ಜರುಗಿಸಿಲ್ಲ, ಯಾುವುದೇ ಸ್ಥಳಿಕರ ಹೇಳಿಕೆಪಡಿದಿಲ್ಲ, ಠಾಣೆಯಲ್ಲಿ ಕೂತು ಒಂದು ಸುಳ್ಳು ದೂರನ್ನು ತಯಾರಿಸಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಮಾನತು ಪಡಿಸಿಕೊಂಡಿರುವ ಹಣದಲ್ಲಿ ನೋಟುಗಳ ಮುಖಬೆಲೆಯನ್ನು ನಾನು ದೂರಿನಲ್ಲಿ ಬರೆದಿಲ್ಲ. ನ್ಯಾಯಾಲಯದ ಮುಂದಿರುವ ಮುಮಾಲಿಗು ಆರೋಪಿತನಿಗೂ ಯಾವುದೇ ರೀತಿಯ ಸಂಬಂದ ಇಲ್ಲ ನಮ್ಮ ಠಾಣೆಯ ಅಂಕೆ ಸಂಖ್ಯೆಯ ಸಲುವಾಗಿ ಆರೋಪಿತನ ವಿರುದ್ಧ ಸುಳ್ಳು ದೂರು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ